# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಭಾರತೀಯ ಹವಾಮಾನ ಇಲಾಖೆ

ಗ್ರಾಮೀಣ ಕೃಷಿ ಹವಾಮಾನ ಸೇವಾ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ನಾಗನಹಳ್ಳಿ, ಮೈಸೂರು 570 003

ದಿನಾಂಕ: 25-01-2024

## ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಕೊಡಗು ಜಿಲ್ಲೆಯ ಹವಾಮಾನ ಮತ್ತು ಕೃಷಿಕಾರ್ಯಕ್ರಮಗಳ ವರದಿ ಪತ್ರಿಕೆ

**ಹವಾಮಾನದ ಮುನ್ಸೂಚನೆ (26–01–2024 ರಿಂದ 30–01–2024)**

| Parameters | 26.01.2024 | 27.01.2024 | 28.01.2024 | 29.01.2024 | 30.01.2024 |
|---|---|---|---|---|---|
| ಮಳೆ (ಮಿ.ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ ($^0$ಸೆ) | 28 | 28 | 28 | 29 | 29 |
| ಕನಿಷ್ಠ ಉಷ್ಣಾಂಶ ($^0$ಸೆ) | 16 | 16 | 16 | 17 | 17 |
| ಮೋಡ (ಆಕ್ಟ್ಸ್) | 3 | 3 | 3 | 2 | 2 |
| ಗರಿಷ್ಠ ಗಾಳಿಯ ತೇವಾಂಶ (%) | 97 | 97 | 97 | 95 | 95 |
| ಕನಿಷ್ಠ ಗಾಳಿಯ ತೇವಾಂಶ (%) | 56 | 56 | 56 | 56 | 56 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 5 | 7 | 10 | 8 | 7 |
| ಗಾಳಿಯ ದಿಕ್ಕು( ಡಿಗ್ರಿ) | 210 | 70 | 70 | 70 | 75 |

**ಮುನ್ಸೂಚನೆಯ ಸಾರಾಂಶ**

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಈ ವಾರದ ಮುನ್ಸೂಚನೆ ಕೊಡಗು ಜಿಲ್ಲೆಯಲ್ಲಿ ದಿನಾಂಕ: 26–01–2024 ರಿಂದ 30–01–2024 ವರೆಗೆ ಮೋಡ ಕವಿದ ವಾತಾವರಣವಿದ್ದು, ಮಳೆ ಬರುವ ಸಂಭವವಿಲ್ಲ. ಗರಿಷ್ಠ ಉಷ್ಣಾಂಶ 28–29°C. ಮತ್ತು ಕನಿಷ್ಠ ಉಷ್ಣಾಂಶ 16–17°C ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇಕಡ 95–97% ವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇಕಡ 56% ವರೆಗೆ ಮತ್ತು ಗಾಳಿಯು ಗಂಟೆಗೆ 5–10 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

**ಕೃಷಿ ಚಟುವಟಿಕೆಗಳ ಬಗ್ಗೆ ಅನುಸರಿಸಬಹುದಾದ ವಿವರ:**

| ಬೆಳೆ/ ಜಾನುವಾರಗಳು | ರೋಗ ಮತ್ತು ಕೀಟ | ಹಾನಿ ಲಕ್ಷಣಗಳು | ಕೃಷಿ ಸಲಹೆಗಳು |
|---|---|---|---|
| ಜನವರಿ ತಿಂಗಳಿನಲ್ಲಿ ಬೆಳೆಯಬಹುದಾದ ಬೆಳೆಗಳು: ಟೊಮೆಟೊ, ಬದನೆಕಾಯಿ, ಮೆಣಸಿನಕಾಯಿ, ಕುಂಬಳಕಾಯಿ ಸೌತೆಕಾಯಿ, ಹಾಗಲಕಾಯಿ, ಕಲ್ಲಂಗಡಿ, ಬೆಂಡಿ, ಅವರೆ, ಮೂಲಂಗಿ, ಕ್ಯಾರೆಟ್, ಇತ್ಯಾದಿ.. | | | |
| • ಕಟಾವು ಮಾಡಿದದವಸ ಧಾನ್ಯಗಳನ್ನು ಚೆನ್ನಾಗಿ ಒಣಗಿಸಿ ಹೆಚ್ಚು ದಿನ ಕೆಡದಂತೆ ಇಡಲು ಏಕದಳ ಧಾನ್ಯಗಳ ತೇವಾಂಶ ಶೇಕಡ 11 ರಿಂದ 12ರಷ್ಟು, ದ್ವಿದಳ ಧಾನ್ಯಗಳ ತೇವಾಂಶ ಶೇಕಡ 9 ರಷ್ಟು, ಎಣ್ಣೆಕಾಳುಗಳ ತೇವಾಂಶ ಶೇಕಡ 8 ರಷ್ಟು ಮತ್ತುತರಕಾರಿ ಬೀಜಗಳ ತೇವಾಂಶ ಶೇಕಡ 5 ರಿಂದ 6 ರಷ್ಟು ಇರಬೇಕು. | | | |
| ತೆಂಗು | ರುಗೋಸ್ ಬಿಳಿ ನೊಣ | ಬಿಳಿ ನೊಣಗಳು ಎಲೆಗಳ ಕೆಳಭಾಗದಲ್ಲಿ ರಸವನ್ನು ಹೀರುತ್ತವೆ. ಹೆಚ್ಚು ರಸಹೀರುವುದರಿಂದ ಸಿಹಿಯಾದದ್ರವ್ಯವನ್ನು ಹೊರಹಾಕುತ್ತದೆ, ಇದು ಕಪ್ಪು ಶಿಲೀಂಧ್ರದ (ಕ್ಯಾಪ್ನೋಡಿಯಮ್) ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಇದು ಸಸ್ಯದ ದ್ಯುತಿಸಂಶ್ಲೇಷಕ ಮೇಲೆ ಪರಿಣಾಮ ಬೀರುತ್ತದೆ. 2.5% ಮೈದಾ ಪೇಸ್ಟ್ ದ್ರಾವಣವನ್ನು ಡಿಟರ್ಜೆಂಟ್/ಖಾದಿ ಸೋಪ್ @ 5 ಗ್ರಾಂ/ಲೀ ನೊಂದಿಗೆ | |

| | | |
|---|---|---|
| | | ಬೆರೆಸಿ ಸಿಂಪಡಿಸುವ ಮೂಲಕ ಎಲೆಯ ಮೇಲ್ಮೈಯಲ್ಲಿ ಕಪ್ಪು ಶಿಲೀಂಧ್ರದ(ಕ್ಯಾಪ್ನೋಡಿಯಮ್) ಬೆಳವಣಿಗೆಯನ್ನು ಹೊರಹಾಕಬಹುದು.<br>ಹೆಚ್ಚು ಹಾನಿಯಾದಲ್ಲಿ, ಬೇವಿನ ಎಣ್ಣೆ 0.5% ಅಥವಾ NSKE 5% ಅನ್ನು ಮಾತ್ರ ಸಿಂಪಡಿಸಿ ಮತ್ತು ಯಾವುದೇ ರೀತಿಯ ಕೀಟನಾಶಕಗಳನ್ನು ಸಿಂಪಡಿಸುವುದು ಸೂಕ್ತವಲ್ಲ. |

- ಬೆಳಗಿನ ಜಾವ ಹಾಗೂ ರಾತ್ರಿ ವೇಳೆ ಉಷ್ಣಾಂಶದಲ್ಲಿ ಸ್ವಲ್ಪ ಇಳಿತವಿರುವುದರಿಂದ ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ವಿದ್ಯುತ್ ಬಲ್ಬ್ ಅನ್ನು ಒದಗಿಸುವ ಮೂಲಕ ಕಾಪಾಡಿಕೊಳ್ಳುವುದು.
- ಎರೆಹುಳು ಸಾಕಾಣಿಕ ಘಟಕದಲ್ಲಿ ಹೆಚ್ಚಿನ ತೇವಾಂಶ ಇರದಂತೆ ಎಚ್ಚರಿಕೆ ವಹಿಸಬೇಕು. ಎರೆಕುಣಿಗಳಲ್ಲಿ ಎರೆಗೊಬ್ಬರ ಉತ್ಪಾದನೆಯಾಗುವವರೆಗೆ ಶೇ. 60–70 ರಷ್ಟು ತೇವಾಂಶ ಇರುವ ಹಾಗೆ ನೋಡಿಕೊಳ್ಳಬೇಕು.

- ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು"ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ರೈತರು ದೂರವಾಣಿ ಮೂಲಕ ಡಾ॥. ಸಿ. ರಾಮಚಂದ್ರ, ಹಿರಿಯ ಕ್ಷೇತ್ರ ಅಧೀಕ್ಷಕರು/ ಡಾ. ಸುಮಂತ್ ಕುಮಾರ್, ಜಿ. ವಿ, ಸಹ ಸಂಶೋಧಕರು, ದೂರವಾಣಿ ಸಂಖ್ಯೆ. 08212591267/ 9535345814 ರವರನ್ನು ಸಂಪರ್ಕಿಸಬಹುದು.

ಕೃಷಿ ಹವಾಮಾನ ಕ್ಷೇತ್ರ ವಿಭಾಗ,
ನಾಗನಹಳ್ಳಿ, ಮೈಸೂರು